**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ವಿರಾಜಪೇಟೆ**

***ಸಿ.ಸಿ. ಸಂಖ್ಯೆ : 348/2018***

**ಡಿಡಬ್ಲ್ಯೂ *2***
**ಆರೋಪಿ ಸಂ. *1***

**ಹೆಸರು** : ಜೆ ಮೈಕಲ್
**ತಂದೆಯ ಹೆಸರು** : ಎನ್ ಜೋಸೆಫ್
**ವಯಸ್ಸು** : 46 ವರ್ಷ
**ಉದ್ಯೋಗ** : ಚಾಲಕ
**ವಾಸಸ್ಥಳ** : ಮಾಲ್ದಾರೆ ಗ್ರಾಮ

**ದಿನಾಂಕ : *14-12-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ. ಡಿ ಸಿ ಡಿ ಆರೋಪಿಗಳ ಪರ ವಕೀಲರಿಂದ:-**

1997 ನೇ ಇಸವಿಯಲ್ಲಿ ಮಾಲ್ದಾರೆ ಬಾಡಗ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನಾನು ಪಿಗ್ಮಿ ಸಂಗ್ರಹಗಾರನಾಗಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ಸದರಿ ಸಂಘದಲ್ಲಿ 2005 ನೇ ಇಸವಿಯಲ್ಲಿ ನನ್ನನ್ನು ಅಟೆಂಡರ್ ಆಗಿ ನೇಮಿಸಿರುತ್ತಾರೆ. ಸದರಿ ಸಂಘದಲ್ಲಿ 2012 ನೇ ಇಸವಿಯಲ್ಲಿ ನನ್ನನ್ನು ಗೋಡೌನ್ ನ ಸಹಾಯಕನಾಗಿ ನೇಮಿಸಿರುತ್ತಾರೆ. ಸದರಿ ಸಂಘದಲ್ಲಿ ಕಾಫೀ ಹಾಗೂ ಕರಿಮೆಣಸು ಸಂಗ್ರಹದ ಗೋಡೌನ್ ಇದ್ದು, ಅದರಲ್ಲಿ ನಾನು ಸಹಾಯಕನಾಗಿ ಕೆಸಲ ಮಾಡಿರುತ್ತೇನೆ. ಸದರಿ ಸಂಘದ ಕಾಫೀ ಹಾಗೂ ಕರಿಮೆಣಸು ಸಂಗ್ರಹ ಗೋಡೌನ್ ನ ಸಂಪೂರ್ಣ ಮೇಲ್ವಿಚಾರಣೆ ಆ ಸಮಯದಲ್ಲಿ ಸದರಿ ಸಂಘದ ಸಿಇಓ ಆಗಿದ್ದ ಎ ಆರ್ ಪಳಂಗಪ್ಪ ನವರಾಗಿತ್ತು. ಸದರಿ ಸಂಘದ ಸದಸ್ಯರು, ಗ್ರಾಹಕರ ಹಾಗೂ ರೈತರಿಂದ ಕಾಫೀ ಹಾಗೂ ಕರಿಮೆಣಸನ್ನು ಸಂಗ್ರಹಿಸಿ ಅದರ ಮೇಲೆ ಅವರಿಗೆ ಸಾಲ ನೀಡುವ ವ್ಯವಸ್ಥೆ ಇದ್ದಿರುತ್ತದೆ. ಗ್ರಾಹಕರು, ಸದಸ್ಯರು ಹಾಗೂ ರೈತರು ಕಾಫೀ ಹಾಗೂ ಮೆಣಸನ್ನು ತಂದಾಗ ಅದನ್ನು ಅಳತೆ ಮಾಡಿ ಅದು ಎಷ್ಟಿದೆ ಎಂಬ ಬಗ್ಗೆ ರಶೀದಿ ನೀಡುವ ಕೆಲಸ ನಾನು ಮಾಡುತ್ತಿದ್ದೆ.

ಸದರಿ ಸಂಘದಲ್ಲಿ ಒಟ್ಟು 5 ಗೋದಾಮುಗಳಿದ್ದು, ಅದರಲ್ಲಿ 2 ರಲ್ಲಿ ಗೊಬ್ಬರಗಳನ್ನು ಸಂಗ್ರಹಿಸುವುದು ಹಾಗೂ ಇನ್ನು 3 ರಲ್ಲಿ ಕಾಫೀ ಹಾಗೂ ಮೆಣಸಿನ ಕಾಳನ್ನು ಸಂಗ್ರಹಹಿಸುವ ವ್ಯವಸ್ಥೆ ಇದ್ದಿರುತ್ತದೆ. ಸಂಘದ ಕಾಂಪಾಂಡಿನ ಒಳಗೆ ಆಗ ಸಿಇಓ ಆಗಿದ್ದ ಎ ಆರ್ ಪಳಂಗಪ್ಪ

ವಾಸದ ವಸತಿಗೃಹ (ಕ್ವಾಟ್ರಸ್) ಇದ್ದಿರುತ್ತದೆ. ಸಂಘವು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತದೆ. ಅದೇ ರೀತಿ ನನ್ನ ಕೆಲಸದ ಅವಧಿಯು ಸಹ ಬೆಳಿಗ್ಗೆ 9 ರಿಂದ 5 ಗಂಟೆಯವರೆಗೆ ಇದ್ದು ಬೆಳಿಗ್ಗೆ ಕೆಲಸಕ್ಕೆ ಬಂದಾಗ ಗೋದಾಮಿನ ಕೀಯನ್ನು ಸದರಿ ಸಿಇಓ ಎ ಆರ್ ಪಳಂಗಪ್ಪ ರವರಿಂದ ಪಡೆದುಕೊಂಡು ಸಂಜೆ ಕೆಲಸ ಮುಗಿದ ಬಳಿಕ ಸದರಿ ಕೀಯನ್ನು ಅವರ ಬಳಿ ಹಿಂದಕ್ಕೆ ನೀಡಿ ನಾನು ಮನೆಗೆ ಹೋಗುತ್ತಿದ್ದೆ.

ದಿನಾಂಕ 28-02-2017 ರಂದು ಗೋದಾಮಿನಲ್ಲಿದ್ದ ಕಾಫಿ ಹಾಗೂ ಕರಿಮೆಣಸಿನ್ನು ಪರಿಶೀಲಿಸಿ ಅಲ್ಲಿ ಸಂಗ್ರಹವಿದ್ದ ಕಾಫೀ ಹಾಗೂ ಕರಿಮೆಣಸಿನ ದಾಸ್ತಾನು ಸರಿ ಇರುತ್ತದೆ ಎಂದು ದೃಢೀಕರಿಸಿರುತ್ತಾರೆ. ದಿನಾಂಕ 01-03-2017 ರಂದು ಬುಧವಾರವಾಗಿದ್ದು, ಆ ದಿನ ಸಂಘಕ್ಕೆ ವಾರದ ರಜೆ ಇದ್ದಿರುತ್ತದೆ. ದಿನಾಂಕ 02-03-2017 ರಂದು ನಾನು ಕೆಲಸಕ್ಕೆ ರಜೆ ಅರ್ಜಿ ಸಲ್ಲಿಸಿ ಆ ದಿನ ನಾನು ಕೆಲಸಕ್ಕೆ ರಜೆ ಮಾಡಿರುತ್ತೇನೆ. ದಿನಾಂಕ 03-03-2017 ರಂದು ನನ್ನ ಕುಟುಂಬದಲ್ಲಿ ತೊಂದರೆಯಾಗಿ ನಾನು ವಿಷ ಸೇವಿಸಿದ್ದು, ಆ ಸಂಬಂಧ ನನ್ನನ್ನು ನನ್ನ ಮನೆಯವರು ಮಡಿಕೇರಿಯ ವೈವಾಸ್ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಂತರ ನಾನು ಆಸ್ಪತ್ರೆಯಿಂದ ದಿನಾಂಕ 22-03-2017 ಬಿಡುಗಡೆಯಾಗಿ ಬಂದಿರುತ್ತೇನೆ. ನಂತರ ನಮ್ಮ ಸಂಘ ಅಧ್ಯಕ್ಷರಾದ ಸಿ ಎ ಸುಬ್ಬಯ್ಯ ರವರು ದಿನಾಂಕ 01-04-2017 ರಂದು 7345 ಕೆಜಿ ಅಂದರೆ 104 ಚೀಲ ಕರಿಮೆಣಸು ಕಳ್ಳತನವಾಗಿರುತ್ತದೆ ಎಂದು ನನ್ನ ಮೇಲೆ ಸಿದ್ದಾಪುರ ಪೋಲಿಸರಿಗೆ ಪುಕಾರು ನೀಡಿರುತ್ತಾರೆ. ಸದರಿ ಕಳ್ಳತನಕ್ಕೂ, ನನಗೂ ಯಾವುದೇ ಸಂಬಂಧ ಇರುವುದಿಲ್ಲ.

ಸದರಿ ದೂರಿನಲ್ಲಿ ಸಿ ಕೆ ಬಶೀರ್ ರವರು 145 ಚೀಲ ಕಾಳು ಮೆಣಸು ಹಾಗೂ ಹೆಚ್ ಎಂ ಶಿವ ಎನ್ನುವವರು 100 ಚೀಲ ಕಾಳುಮೆಣಸನ್ನು ಅಡವಿಟ್ಟಿರುವುದಾಗಿ ಅದರಲ್ಲಿ 104 ಚೀಲ ಕರಿಮೆಣಸು ನಾನು ಕಳ್ಳತನ ಮಾಡಿರುವುದಾಗಿ ನನ್ನ ಮೇಲೆ ಸುಳ್ಳು ದೂರನ್ನು ನೀಡಿರುತ್ತಾರೆ. ನಾನು ಸದರಿ ಕಾಳು ಮೆಣಸಿನ ಚೀಲವನ್ನು ಯಾವತ್ತೂ ಕಳ್ಳತನ ಮಾಡಿರುವುದಿಲ್ಲ ಹಾಗೂ ನನಗೂ ಅದಕ್ಕೂ ಯಾವುದೇ ಸಂಬಂಧ ಇರುವುದಿಲ್ಲ.

ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಾಯವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.